# ಕರ್ನಾಟಕ ವಿಧಾನ ಪರಿಷತ್

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 555

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ. ಎಸ್.ಎಲ್.ಧರ್ಮೇಗೌಡ

ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಉತ್ತರಿಸಬೇಕಾದ ದಿನಾಂಕ : 13–12–2018

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಚಿಕ್ಕಮಗಳೂರು ಜಿಲ್ಲೆಯಲ್ಲಿ ಸರ್ಕಾರಿ ಬಾಲಕಿಯರ ಬಾಲಮಂದಿರವಿಲ್ಲದೇ ಬಾಲಕಿಯರ ಪಾಲನೆ ಮತ್ತು ಪೋಷಣೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ. | ಹಾಗಿದ್ದಲ್ಲಿ, ರಾಜ್ಯದಲ್ಲಿ ಒಟ್ಟಾರೆ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಬಾಲಕಿಯರ ಬಾಲಮಂದಿರಗಳು ಎಷ್ಟು; ಆ ಬಾಲಮಂದಿರಗಳ ಸಾಮರ್ಥ್ಯ ಸಂಖ್ಯೆ ಎಷ್ಟು; ಆ ಬಾಲಮಂದಿರಗಳಲ್ಲಿ ಹಾಲಿ ಇರುವ ಬಾಲಕಿಯರ ಸಂಖ್ಯೆ ಎಷ್ಟು; ಹೆಚ್ಚುವರಿಯಾಗಿದ್ದಲ್ಲಿ ಅವರುಗಳನ್ನು ಹೇಗೆ ನಿರ್ವಹಣೆ ಮಾಡಲಾಗುತ್ತಿದೆ; (ಬಾಲಮಂದಿರವಾರು ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 27 ಜಿಲ್ಲೆಗಳಲ್ಲಿ 29 ಬಾಲಕಿಯರ ಬಾಲಮಂದಿರಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ 2 ಬಾಲಮಂದಿರಗಳು ಮನೋವಿಕಲ ಬಾಲಕಿಯರಿಗಾಗಿ ನಡೆಸಲ್ಪಡುತ್ತಿದೆ.<br><br>ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಾಲಕಿಯರ ಬಾಲಮಂದಿರಗಳು, ಆ ಬಾಲಮಂದಿರಗಳ ಸಾಮರ್ಥ್ಯ (ಮಂಜೂರಾತಿ ಸಂಖ್ಯೆ) ಮತ್ತು ಹಾಲಿ ಇರುವ ಬಾಲಕಿಯರ ಸಂಖ್ಯೆ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br>ಬಾಲಮಂದಿರಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿದ್ದಲ್ಲಿ ಈ ಕೆಳಕಂಡಂತೆ ಕ್ರಮವಹಿಸಲಾಗುತ್ತದೆ.<br><br>• ಬಾಲಮಂದಿರಗಳಲ್ಲಿ 5–10 ಮಕ್ಕಳು ಹೆಚ್ಚಾದಲ್ಲಿ ಆಯಾ ಬಾಲ ಮಂದಿರಗಳಲ್ಲಿಯೇ ಮುಂದುವರೆಸಲಾಗುವುದು.<br>• ಬಾಲ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯ್ದೆ 2015ರನ್ವಯ ನೊಂದಣಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಸಂಸ್ಥೆಗಳಿಗೆ ಮಕ್ಕಳನ್ನು ದಾಖಲಿಸಲಾಗುವುದು.<br>• ಪ್ರಾಯೋಜಕತ್ವ ಕಾರ್ಯಕ್ರಮದಡಿ ಮಕ್ಕಳ ಶಿಕ್ಷಣಕ್ಕೆ ಆರ್ಥಿಕ ಸಹಾಯ ನೀಡುವುದರ ಮೂಲಕ ಪೋಷಕರ ವಶಕ್ಕೆ ಬಿಡುಗಡೆ ಮಾಡಲಾಗುವುದು.<br>• ಜಿಲ್ಲೆಗಳ ಬೇಡಿಕೆಯನ್ನು ಪರಿಗಣಿಸಿ ಮೂಲಭೂತ ಸೌಕರ್ಯಗಳನ್ನು ನೀಡುವುದರೊಂದಿಗೆ ಬಾಲಮಂದಿರಗಳ ಸಾಮರ್ಥ್ಯವನ್ನು ಹೆಚ್ಚಿಸಲು ಕ್ರಮವಹಿಸಲಾಗುತ್ತದೆ. |

| | | |
|---|---|---|
| ಇ | ಇತ್ತೀಚಿಗೆ ಚಿಕ್ಕಮಗಳೂರಿನಲ್ಲಿರುವ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಪಾಲನೆ ಮತ್ತು ಪೋಷಣೆಗೆ ಬರುವ ಬಾಲಕಿಯರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಚಿಕ್ಕಮಗಳೂರಿಗೆ ಸರ್ಕಾರಿ ಬಾಲಕಿಯರ ಬಾಲಮಂದಿರ ಮಂಜೂರು ಮಾಡುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ ಪ್ರಸ್ತಾವನೆ ಯಾವ ಹಂತದಲ್ಲಿದೆ; | ಚಿಕ್ಕಮಗಳೂರು ಜಿಲ್ಲೆಯ ಸರ್ವೋದಯ ಸಮಾಜ ಸೇವಾ ಸಂಸ್ಥೆಯನ್ನು ಅರ್ಹ ಸಂಸ್ಥೆಯೆಂದು ಗುರುತಿಸಿ ದಿ:24.02.2018ರಂದು ಸರ್ಕಾರದಿಂದ ಮಂಜೂರಾತಿ ನೀಡಲಾಗಿದ್ದು, ಈ ಸಂಸ್ಥೆಯಲ್ಲಿ ಹೆಣ್ಣು ಮಕ್ಕಳಿಗೆ ಪಾಲನೆ ಮತ್ತು ಪೋಷಣೆ ನೀಡಲಾಗುತ್ತಿದೆ.<br>ಪ್ರಸ್ತುತ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸರ್ಕಾರಿ ಬಾಲಕಿಯರ ಬಾಲ ಮಂದಿರ ಆರಂಭಿಸಲು ಪ್ರಸ್ತಾವನೆ ಇರುವುದಿಲ್ಲ. |
| ಈ | ಹಾಗಿದ್ದಲ್ಲಿ, ಪ್ರಸ್ತುತ ಸಾಲಿನಲ್ಲಿ ಮಂಜೂರು ಮಾಡಲಾಗುವುದೇ; ಈ ಕುರಿತು ಸರ್ಕಾರದ ನಿಲುವೇನು; | ಉದ್ಭವಿಸುವುದಿಲ್ಲ |
| ಉ | ಬಾಲಕಿಯರ ಬಾಲಮಂದಿರಗಳನ್ನು ಮಂಜೂರು ಮಾಡುವ ಕುರಿತು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು? (ವಿವರ ನೀಡುವುದು) | ಬಾಲ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯ್ದೆ 2015,ಸೆಕ್ಷನ್ 50(1)ರನ್ವಯ ಪ್ರತಿ ಜಿಲ್ಲೆ/ ಜಿಲ್ಲೆಗಳಿಗೆ ಸರ್ಕಾರದವತಿಯಿಂದ ಅಥವಾ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಬಾಲ ಮಂದಿರಗಳನ್ನು ನಡೆಸಬಹುದಾಗಿದೆ. ಜಿಲ್ಲೆಗಳ ಬೇಡಿಕೆಯನ್ನು ಪರಿಗಣಿಸಿ ಹಂತಹಂತವಾಗಿ ಬಾಲಮಂದಿರಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ. |

ಸಂ:ಮಮಇ 222 ಮಭಾಬ 2018

(ಡಾ. ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಶ್ರೀ. ಎಸ್.ಎಲ್.ಧರ್ಮೇಗೌಡ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 555ಕ್ಕೆ ಅನುಬಂಧ

**ಬಾಲಕಿಯರ ಬಾಲಮಂದಿರಗಳಲ್ಲಿ ಇರುವ ಮಕ್ಕಳ ವಿವರ.**

| ಕ್ರ.ಸಂ | ಜಿಲ್ಲೆಗಳ ಹೆಸರು | ಬಾಲಮಂದಿರಗಳ ಸಂಖ್ಯೆ | ಬಾಲಮಂದಿರ | ಮಂಜೂರಾದ ಮಕ್ಕಳ ಸಂಖ್ಯೆ | ಹಾಲಿ ಇರುವ ಮಕ್ಕಳ ಸಂಖ್ಯೆ. |
|---|---|---|---|---|---|
| 1 | ಬೆಂಗಳೂರು(ನ) | 1 | ಬಾಲಕಿಯರ ಬಾಲ ಮಂದಿರ(ಸಿಐಸಿ) | 100 | 41 |
| 2 | ಬೀದರ | 1 | ಬಾಲಕಿಯರ ಬಾಲ ಮಂದಿರ | 100 | 53 |
| 3 | ಬಿಜಾಪುರ | 1 | ಬಾಲಕಿಯರ ಬಾಲ ಮಂದಿರ | 100 | 66 |
| 4 | ಬಾಗಲಕೋಟೆ | 1 | ಬಾಲಕಿಯರ ಬಾಲ ಮಂದಿರ | 50 | 40 |
| 5 | ಬೆಳಗಾವಿ | 1 | ಬಾಲಕಿಯರ ಬಾಲ ಮಂದಿರ | 100 | 49 |
| 6 | ಬಳ್ಳಾರಿ | 1 | ಬಾಲಕಿಯರ ಬಾಲ ಮಂದಿರ | 50 | 44 |
| 7 | ಚಾಮರಾಜನಗರ | 1 | ಬಾಲಕಿಯರ ಬಾಲ ಮಂದಿರ | 50 | 29 |
| 8 | ಚಿಕ್ಕಬಳ್ಳಾಪುರ | 1 | ಬಾಲಕಿಯರ ಬಾಲ ಮಂದಿರ | 50 | 15 |
| 9 | ದಾವಣಗೆರೆ | 1 | ಬಾಲಕಿಯರ ಬಾಲ ಮಂದಿರ | 100 | 23 |
| 10 | ಧಾರವಾಡ | 2 | ಬಾಲಕಿಯರ ಬಾಲ ಮಂದಿರ | 200 | 104 |
| | | | ಮನೋವಿಕಲ ಬಾಲಕಿಯರ ಬಾಲ ಮಂದಿರ | 50 | 49 |
| 11 | ಗುಲ್ಬರ್ಗಾ | 2 | ಬಾಲಕಿಯರ ಬಾಲ ಮಂದಿರ | 100 | 87 |
| | | | ಮನೋವಿಕಲ ಬಾಲಕಿಯರ ಬಾಲ ಮಂದಿರ | 50 | 36 |
| 12 | ಗದಗ | 1 | ಬಾಲಕಿಯರ ಬಾಲ ಮಂದಿರ | 100 | 51 |
| 13 | ಹಾಸನ | 1 | ಬಾಲಕಿಯರ ಬಾಲ ಮಂದಿರ | 50 | 53 |
| 14 | ಹಾವೇರಿ | 1 | ಬಾಲಕಿಯರ ಬಾಲ ಮಂದಿರ | 50 | 16 |
| 15 | ಕೋಲಾರ | 1 | ಬಾಲಕಿಯರ ಬಾಲ ಮಂದಿರ | 75 | 6 |
| 16 | ಕೊಪ್ಪಳ | 1 | ಬಾಲಕಿಯರ ಬಾಲ ಮಂದಿರ | 50 | 41 |
| 17 | ಕೊಡಗು | 1 | ಬಾಲಕಿಯರ ಬಾಲ ಮಂದಿರ | 50 | 49 |
| 18 | ಮಂಡ್ಯ | 1 | ಬಾಲಕಿಯರ ಬಾಲ ಮಂದಿರ | 50 | 30 |
| 19 | ಮೈಸೂರು | 1 | ಬಾಲಕಿಯರ ಬಾಲ ಮಂದಿರ | 100 | 53 |
| 20 | ರಾಮನಗರ | 1 | ಬಾಲಕಿಯರ ಬಾಲ ಮಂದಿರ | 50 | 48 |
| 21 | ರಾಯಚೂರು | 1 | ಬಾಲಕಿಯರ ಬಾಲ ಮಂದಿರ | 100 | 32 |

| | | | | | |
|---|---|---|---|---|---|
| 22 | ತುಮಕೂರು | 1 | ಬಾಲಕಿಯರಬಾಲ ಮಂದಿರ | 100 | 51 |
| 23 | ಉಡುಪಿ | 1 | ಬಾಲಕಿಯರ ಬಾಲ ಮಂದಿರ | 100 | 38 |
| 24 | ಉತ್ತರ ಕನ್ನಡ | 1 | ಬಾಲಕಿಯರ ಬಾಲ ಮಂದಿರ | 50 | 24 |
| 25 | ಯಾದಗಿರಿ | 1 | ಬಾಲಕಿಯರ ಬಾಲ ಮಂದಿರ | 50 | 46 |
| 26 | ಚಿತ್ರದುರ್ಗ | 1 | ಬಾಲಕಿಯರ ಬಾಲಮಂದಿರ | 50 | 36 |
| 27 | ಶಿವಮೊಗ್ಗ | 1 | ಬಾಲಕಿಯರ ಬಾಲಮಂದಿರ | 50 | 39 |
| | ಒಟ್ಟು | 29 | | 2175 | 1249 |